ಏ) ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ನಿಲ್ಲಿಸಲು ಸರ್ಕಾರವು ಎ ಎನ್ ಎಫ್ ದಳವನ್ನು ರಚಿಸಿರುತ್ತದೆ ಪ್ರಸ್ತುತ ಪ್ರಮುಖ ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಪೊಲೀಸ್ ಅಧೀಕ್ಷಕರ ಅಧೀನದಲ್ಲಿ ಎ ಎನ್ ಎಫ್ ತುಕಡಿಗಳನ್ನು ಕೋಂಬಿಂಗ್ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ

925 (1217) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿರುವ ಕೇಂದ್ರ ಪುರಾತತ್ವ ಇಲಾಖೆ ಮತ್ತು ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಗುರುತಿಸಲ್ಪಟ್ಟ ಪ್ರವಾಸಿ ಕೇಂದ್ರಗಳು ಯಾವುವು,

ಆ) ಇವುಗಳ ಮರೋಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಮೊತ್ತ ಎಷ್ಟು (ಕಳೆದ 3 ವರ್ಷಗಳ ವಿವರ ನೀಡುವುದು,

ಇ) ಪ್ರವಾಸಿ ಕೇಂದ್ರಗಳಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಇವುಗಳನ್ನು ನಿಯಂತ್ರಿಸಲು ತೆಗೆದುಕೊಂಡಿರುವ ಕ್ರಮಗಳಾವುವು,

ಉ) ಹೆಚ್ಚು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ತೆಗೆದುಕೊಂಡ ಪೂರ್ವಭಾವಿ ಯೋಜನೆಗಳು ಯಾವುವು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಕೇಂದ್ರ ಪುರಾತತ್ವ ಇಲಾಖೆಯಿಂದ ಕರ್ನಾಟಕದಲ್ಲಿ ಸುಮಾರು 608 ಸಂರಕ್ಷಿತ ಸ್ಮಾರಕಗಳನ್ನು (ದೇವಸ್ಥಾನಗಳು, ಕೋಟೆಗಳು, ಅರಮನೆಗಳು ಮಸೀದಿಗಳು ಹಾಗೂ ವಿಶ್ವ ಪರಂಪರೆಯ ಹಂಪೆಯನ್ನು ಒಳಗೊಂಡಂತೆ) ಗುರುತಿಸಲಾಗಿದೆ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ಕೇಂದ್ರಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಆ) ಅ) ಇವುಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ರಾಜ್ಯದಿಂದ ಬಿಡುಗಡೆಯಾದ ಅನುದಾನ ಹೀಗಿವೆ

1) 2003–04ರಲ್ಲಿ 1650 00 ಲಕ್ಷಗಳು
2) 2004–05ರಲ್ಲಿ 5604 00 ಲಕ್ಷಗಳು
3) 2005–06ರಲ್ಲಿ 3123 77 ಲಕ್ಷಗಳು

ಆ) ಇವುಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಪುರಾತತ್ವ ಇಲಾಖೆಯಿಂದ ಬಿಡುಗಡೆಯಾದ ಅನುದಾನ ಹೀಗಿವೆ

1) 2003–04ರಲ್ಲಿ 509 17 ಲಕ್ಷಗಳು
2) 2004–05ರಲ್ಲಿ 519 87 ಲಕ್ಷಗಳು
3) 2005–06ರಲ್ಲಿ 681 53 ಲಕ್ಷಗಳು (ಬೆಂಗಳೂರು ವಲಯ)

ಇ) ಈ ಬಗ್ಗೆ ಇಲಾಖೆಗೆ ದೂರುಗಳು ಬಂದಿರುವುದಿಲ್ಲ

ಈ) ನಿಯಂತ್ರಣ ಕ್ರಮವು ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ

ಉ) 1 ಪ್ರವಾಸಿ ಸ್ಥಳಗಳಲ್ಲಿ ಹಾಲಿ ಇರುವ ಸೌಲಭ್ಯಗಳನ್ನು ಉನ್ನತೀಕರಿಸುವುದು

2 ನೂತನವಾಗಿ ಪ್ರವಾಸಿ ಸ್ಥಳಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು

3 ಖಾಸಗೀ ಸಹಭಾಗಿತ್ವದಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸುವುದು ಹಾಗೂ ನಿರ್ವಹಿಸುವುದು

4 ಪ್ರವಾಸಿ ಮಾಹಿತಿ ಕೇಂದ್ರಗಳ ಮೂಲಕ ಪ್ರವಾಸಿ ಸ್ಥಳಗಳ ಮಾಹಿತಿ ಮಡಿಕೆಗಳನ್ನು ವಿತರಿಸಿ ಪ್ರಚಾರ ಒದಗಿಸುವುದು

5 ದೇಶೀಯ ಹಾಗೂ ವಿದೇಶೀಯ ಪ್ರವಾಸಿ ಮಾರುಕಟ್ಟೆಗಳಲ್ಲಿ ಭಾಗವಹಿಸಿ ಪ್ರಚಾರ ನೀಡುವುದು

6 ದೇಶೀಯ/ವಿದೇಶೀಯ ಪ್ರಮುಖ ಪ್ರವಾಸಿ ಟೂರ್ ಆಪರೇಟರ್‌ಗಳ ಪ್ರತಿನಿಧಿಗಳಿಗೆ ರಾಜ್ಯದಲ್ಲಿನ ಪ್ರವಾಸಿ ಕೇಂದ್ರಗಳ ಬಗ್ಗೆ ಹೆಚ್ಚಿನ ಮಾಹಿತಿ/ಅರಿವು ಮೂಡಿಸಲು ಪರಿಚಯಾತ್ಮಕ ಪ್ರವಾಸಗಳನ್ನು ಏರ್ಪಡಿಸುವುದು ಇತ್ಯಾದಿ ಯೋಜನೆಗಳ ಮೂಲಕ ರಾಜ್ಯಕ್ಕೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲಾಗುತ್ತಿದೆ

ಅನುಬಂಧ

ವಿಶೇಷ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗುರುತಿಸಲಾದ ಮುಖ್ಯ ಪ್ರದೇಶಗಳು

1 ಪ್ರವಾಸಿಗಳಿಗಾಗಿ ಗುರುತಿಸಲಾದ ಸ್ಥಳಗಳು ಕೆಳಗೆ ಪಟ್ಟಿ ಮಾಡಲಾದಂತೆ ಇವೆ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಸ್ಥಳ
1	ಮೈಸೂರು	ಗುಂಡ್ಲುಪೇಟೆ	ಬಂಡಿಪುರ, ಹಿಮವದ್–ಗೋಪಾಲಸ್ವಾಮಿ ಬೆಟ್ಟ, ತೆರಕಣಾಂಬಿ

1	2	3	4
		ಟಿ ನರಸೀಪುರ	ತಲಕಾಡು, ಸೋಮನಾಥಪುರ, ಗರ್ಗೇಶ್ವರಿ
		ನಂಜನಗೂಡು	ನಂಜನಗೂಡು
		ಯಳಂದೂರು	ಬಿಳಿಗಿರಿರಂಗನ ಬೆಟ್ಟ
		ಕೊಳ್ಳೇಗಾಲ	ಮಲೆಮಹದೇಶ್ವರ ಬೆಟ್ಟ
		ಹೆಚ್ ಡಿ ಕೋಟೆ	ಖಾರಾಪುರ
		ಚಾಮರಾಜನಗರ	ಚಿಕ್ಕಹೊಳೆ ಅಣೆಕಟ್ಟು
		ಹುಣಸೂರು	ಗೊಮ್ಮಟಗಿರಿ
2	ಕೊಡಗು	ಮಡಿಕೇರಿ	ಮಡಿಕೇರಿ, ಅಬ್ಬಿಫಾಲ್ಸ್, ತಲಕಾವೇರಿ, ನಲಕನಾಡು, ಭಾಗಮಂಡಲ
		ಸೋಮವಾರಪೇಟೆ	ಹಾರಂಗಿ ಜಲಾಶಯ, ಕೂಡಿಗೆ, ಚಟ್ಟಹಳ್ಳಿ, ನಿಸರ್ಗಧಾಮ
		ವಿರಾಜಪೇಟೆ	ನಾಗರಹೊಳೆ, ಇರ್ಪು
3	ಮಂಡ್ಯ	ಮಂಡ್ಯ	ಗಾಣದಾಳು, ಹೊನಬೂದನೂರು, ಬಸರಾಳು
		ಕೆ ಆರ್ ಪೇಟೆ	ಹೊಸಹೊಳಲು, ಕಿಕ್ಕೇರಿ
		ವಾಂಡವಪುರ	ಮೇಲುಕೋಟೆ
		ಮದ್ದೂರು	ಕೊಕ್ಕರೆ ಬೆಳ್ಳೂರು
		ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ, ಬೃಂದಾವನ ಗಾರ್ಡನ್, ರಂಗನತಿಟ್ಟು, ಹುಲಿಕೆರೆ
		ಮಳವಳ್ಳಿ	ಶಿವನಸಮುದ್ರ
4	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಶಿವಗಂಗಾ

1	2	3	4
		ಮಾಗಡಿ	ಮಾಗಡಿ, ಸಾವನದುರ್ಗ, ತಿಪ್ಪಗೊಂಡನಹಳ್ಳಿ
		ಕನಕಪುರ	ಮೇಕೆದಾಟು
		ಬೆಂಗಳೂರು ಉತ್ತರ	ಹೆಸರಘಟ್ಟ
		ದೊಡ್ಡಬಳ್ಳಾಪುರ	ಘಾಟಿ ಸುಬ್ರಮಣ್ಯ, ಕನಸವಾಡಿ
		ಆನೇಕಲ್	ಮುತ್ಯಾಲಮಡವು, ಬನ್ನೇರುಘಟ್ಟ
		ಬೆಂಗಳೂರು ದಕ್ಷಿಣ	ರಾಮೇನಹಳ್ಳಿ
		ಚನ್ನಪಟ್ಟಣ	ಚನ್ನಪಟ್ಟಣ
		ರಾಮನಗರ	ರಾಮನಗರ, ಕಣ್ವ, ರೇವಣಸಿದ್ದೇಶ್ವರ ಬೆಟ್ಟ
5	ತುಮಕೂರು	ತುಮಕೂರು	ಸಿದ್ದಗಂಗ, ಕೈದಾಳ, ದೇವರಾಯನದುರ್ಗ
		ಕೊರಟಗೆರೆ	ಕೊರಟಗೆರೆ, ಸಿದ್ದರಬೆಟ್ಟ, ತೀತ ಜಲಾಶಯ
		ಶಿರಾ	ಶಿರಾ
		ಕುಣಿಗಲ್	ಯಡಿಯೂರು, ಮಾರ್ಕೋನಹಳ್ಳಿ
		ಪಾವಗಡ	ಪಾವಗಡ
		ಮಧುಗಿರಿ	ಮಧುಗಿರಿ
		ತಿಪಟೂರು	ಅರಳುಗುಪ್ಪ
		ಗುಬ್ಬಿ	ಗುಬ್ಬಿ
		ತುರುವೇಕೆರೆ	ತುರುವೇಕೆರೆ
		ಚಿಕ್ಕನಾಯಕನಹಳ್ಳಿ	ತೀರ್ಥ ರಾಮಲಿಂಗೇಶ್ವರ ಸ್ವಾಮಿ, ವಜ್ರ, ಹಂದನಕೆರೆ

1	2	3	4
6	ಕೋಲಾರ	ಗೌರಿಬಿದನೂರು	ವಿದುರಾಶ್ವತ್ಥ, ಮಿಣಕನಗುರ್ಕಿ
		ಚಿಕ್ಕಬಳ್ಳಾಪುರ	ನಂದಿಬೆಟ್ಟ, ಮುದ್ದೇನಹಳ್ಳಿ
		ಮಾಲೂರು	ಭಂಗಾರ ತಿರುಪತಿ
		ಚಿಂತಾಮಣಿ	ಕೈವಾರ, ಕುರುಡುಮಲೆ
		ಕೆ ಜಿ ಎಫ್	ಕೆ ಜಿ ಎಫ್
		ಮುಳುಬಾಗಿಲು	ಮುಳುಬಾಗಿಲು
		ಬಂಗಾರಪೇಟೆ	ಕಮ್ಮಸಂದ್ರ, ಬೇತಮಂಗಲ
		ಬಾಗೇವಲ್ಲಿ	ಬಾಗೇವಲ್ಲಿ
7	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ, ಚಂದ್ರವಳ್ಳಿ, ಜೋಗಿಮಟ್ಟಿ
		ಹೊಸದುರ್ಗ	ರಾಮೇಶ್ವರ
		ಚಳ್ಳಕೆರೆ	ನಾಯಕನಹಟ್ಟಿ, ದೊಡ್ಡಗುಡ್ಡ
		ಹಿರಿಯೂರು	ವಾಣಿವಿಲಾಸ ಸಾಗರ, ಮಾರಿಕಣಿವೆ
		ಹರಿಹರ	ಹರಿಹರ
		ಮೊಳಕಾಲ್ಮೂರ್	ರಾಮಮರ, ಜೊತಿಂಗ ರಾಮೇಶ್ವರ, ಬ್ರಹ್ಮಗಿರಿ
		ಹೊಳಲಕೆರೆ	ಹೊಳಲಕೆರೆ–ಗಣೇಶ ದೇವಾಲಯ
8	ಹಾಸನ	ಹಾಸನ	ಹಾಸನ, ಮೊಸಳೆ ಹೊಸಹಳ್ಳಿ, ಶಾಂತಿಗ್ರಾಮ, ಕೋರಮಂಗಲ, ದೊಡ್ಡಗದ್ದನಳ್ಳಿ
		ಬೇಲೂರು	ಬೇಲೂರು, ಹಳೇಬೀಡು
		ಅರಸೀಕೆರೆ	ಹಾರನಹಳ್ಳಿ
		ಸಕಲೇಶಪುರ	ಮರಗುಂದ

1	2	3	4
		ಚನ್ನರಾಯಪಟ್ಟಣ	ಶ್ರವಣಬೆಳಗೊಳ
		ಅರಕಲಗೂಡು	ರಾಮನಾಥಪುರ, ಗೊರೂರು
		ಹೊಳೆನರಸೀಪುರ	ಶ್ರೀರಾಮ ದೇವರ ಅಣೆಕಟ್ಟು
9	ಚಿಕ್ಕಮಗಳೂರು	ಚಿಕ್ಕಮಗಳೂರು	ಮುಳ್ಳಯನಗಿರಿ, ಬಾಬಾಬುಡನ್ ಗಿರಿ, ಹಿರೇಮಗಳೂರು, ಮುತ್ತೋಡಿ ಪ್ರಾಣಿ ಅಭಯಧಾಮ ಬೆಳವಾಡಿ
		ತರೀಕೆರೆ	ಕೆಮ್ಮಣ್ಣಗುಂಡಿ, ಅಮೃತಾಪುರ, ಭದ್ರಯೋಜನೆ
		ಮೂಡಿಗೆರೆ	ಕಳಸ, ಹೊರನಾಡು, ಕುದುರೆಮುಖ, ಅಂಗಡಿ ಬಳ್ಳಾಲರಾಯನದುರ್ಗ
		ಶೃಂಗೇರಿ	ಶೃಂಗೇರಿ, ಕಿಗ್ಗಾ
		ಕಡೂರು	ಅಯ್ಯನಕೆರೆ
		ಕೊಪ್ಪ	ಹಿರೇಕೊಡ್ಲಿ
10	ಶಿವಮೊಗ್ಗ	ಶಿವಮೊಗ್ಗ	ಗಾಜನೂರು, ಕೂಡ್ಲಿ, ತೀರ್ಥಹಳ್ಳಿ, ಕವಲೇದುರ್ಗ ಅಂಬುತೀರ್ಥ, ಆಗುಂಬೆ, ಮಂದಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚಮೃಗವಧೆ
		ಹೊಸನಗರ	ನಗರ, ಹುಂಚ, ಕೊಡಚಾದ್ರಿ
		ಸಾಗರ	ಇಕ್ಕೇರಿ, ಜೋಗ್‌ಫಾಲ್ಸ್, ವರದಮೂಲ, ಕೆಳದಿ

1	2	3	4
		ಭದ್ರಾವತಿ	ಭದ್ರಾವತಿ
		ಶಿಕಾರಿಮರ	ತೊಗರ್ಸಿ, ಬಳ್ಳಿಗಾವಿ ಉಡುತಡಿ
		ಚನ್ನಗಿರಿ	ಶಾಂತಿಸಾಗರ
		ಸೊರಬ	ಸೊರಬ, ಚಂದ್ರಗುತ್ತಿ
		ಹೊನ್ನಾಳಿ	ತೀರ್ಥರಾಮೇಶ್ವರ
11	ದಕ್ಷಿಣ ಕನ್ನಡ	ಕಾರ್ಕಳ	ಕಾರ್ಕಳ, ಮೂಡಬಿದ್ರಿ
		ಉಡುಪಿ	ಉಡುಪಿ, ಮಲ್ಪೆ, ನೇಂಟ್ ಮೇರಿ ದ್ವೀಪ, ಕಾಪು
		ಕುಂದಾಮರ	ಕುಂದಾಪುರ, ಮರವಂತೆ, ಕೊಲ್ಲೂರು
		ಮಂಗಳೂರು	ಸುರತ್ಕಲ್, ಪಣಂಬೂರ್, ಉಳ್ಳಾಲ, ಸೋಮೇಶ್ವರ, ಕಟೀಲ್
		ಬೆಳ್ತಂಗಡಿ	ಧರ್ಮಸ್ಥಳ, ವೇಣೂರ್
		ಸುಳ್ಯ	ಸುಬ್ರಮಣ್ಯ
		ಮತ್ತೂರು	ಬೇಂದ್ರೇತೀರ್ಥ, ಶಿರಾಡಿ, ಉಪ್ಪಿನಂಗಡಿ
12	ಉತ್ತರ ಕನ್ನಡ	ಕಾರವಾರ	ಕಾರವಾರ, ಕರ್ಮಗೋಡ್, ಅಂಜದೀವ್ ದ್ವೀಪ, ದೇವಗಡ
		ಸೂಪ	ಉಳವಿ, ರಾಮನಗರ, ಕ್ಯಾಸಲ್–ರಾಕ್
		ಯಲ್ಲಾಪುರ	ಯಲ್ಲಾಪುರ, ಮಾಗೋಡು ಜಲಪಾತ, ಲಾಲಗುಲಿ ಜಲಪಾತ
		ಹಳಿಯಾಳ	ಹಳಿಯಾಳ, ದಾಂಡೇಲಿ

1	2	3	4
		ಸಿದ್ದಾಪುರ	ಸಿದ್ದಾಪುರ, ಉಂಚೋಳಿ ಜಲಪಾತ
		ಸಿರಸಿ	ಸಿರಸಿ, ಸೊಂದಾ, ಬನವಾಸಿ
		ಕುಮಟಾ	ಗೋಕರ್ಣ, ಯಾಣ, ಧಾರೇಶ್ವರ
		ಅಂಕೋಲ	ಅಂಕೋಲ
		ಭಟ್ಕಳ	ಭಟ್ಕಳ, ಮುರಡೇಶ್ವರ
		ಹೊನ್ನಾವರ	ಬಸವರಾಜ್ ದುರ್ಗ, ಇಡಗುಂಜಿ
13	ಬಳ್ಳಾರಿ	ಹೊಸಪೇಟೆ	ಹಂಪಿ, ತುಂಗಭದ್ರಾ ಅಣೆಕಟ್ಟು
		ಸಂಡೂರ್	ತೋರಣಗಲ್, ರಾಮಘಡ್
14	ಧಾರವಾಡ	ಗದಗ	ಗದಗ, ಲಕ್ಕುಂಡಿ
		ಶಿಗ್ಗಾಂ	ಶಿಗ್ಗಾಂ, ಬಾಡ
		ನರಗುಂದ	ನರಗುಂದ
		ಹಾನಗಲ್	ಹಾನಗಲ್
		ಮುಂಡಗಿ	ಸಿಂಗಬಾಲೂರು
		ಹಿರೇಕೆರೂರ್	ಅಬಲೂರು
		ಬ್ಯಾಡಗಿ	ಕಾಗಿನೆಲೆ
15	ಬೆಳಗಾಂ	ಬೈಲಹೊಂಗಲ	ಶ್ರೀಸೋಗಲ ಕ್ಷೇತ್ರದ, ಕಿತ್ತೂರ್, ದೇಗಾಂ ಅಥವಾ ದೇಗಾವಿ
		ಸೌಂದತ್ತಿ	ಸೌಂದತ್ತಿ, ಮಲಪ್ರಭಾ ಅಣೆಕಟ್ಟು
		ಗೋಕಾಕ್	ಗೋಕಾಕ್ ಜಲಪಾತ
		ಖಾನಾಪುರ	ಹಲಸಿ

1	2	3	4
		ಬೆಳಗಾಂ	ರಾಜಹಂಸಘಡ ರಾಮತೀರ್ಥ
		ರಾಮದುರ್ಗ	ಶಬರಿ ಕಣಿವೆ
		ಹುಕ್ಕೇರಿ	ಘಟಪ್ರಭಾ
16	ರಾಯಚೂರು	ರಾಯಚೂರು	ರಾಯಚೂರು, ನಾರದಗುಡ್ಡ, ಮಳಿಯಾಬಾದ್
		ಮಾನ್ವಿ	ಮಾನ್ವಿ, ಕಲ್ಲೂರ್
		ಸಿಂಧನೂರ್	ಮಾಸ್ಕಿ
		ಗಂಗಾವತಿ	ಆನೇಗುಂದಿ, ಕನಕಗಿರಿ
		ಕೊಪ್ಪಳ	ಕೊಪ್ಪಳ
		ಲಿಂಗನಗೂರ್	ಹಟ್ಟಿ, ಮುದಗಲ್
		ಯಲಬುರ್ಗಿ	ಇಟಗಿ, ಕುಕ್‌ನೂರ್
		ದೇವದುರ್ಗ	ಗಬ್ಬೂರ್
17	ಬಿಜಾಪುರ	ಬಿಜಾಮರ	ಬಿಜಾಪುರ, ತೊರವಿ
		ಬಸವನ ಬಾಗೇವಾಡಿ	ಬಸವನ ಬಾಗೇವಾಡಿ, ಆಲಮಟ್ಟಿ
		ಹುನಗುಂದ	ಐಹೊಳೆ, ಕೂಡಲಸಂಗಮ
		ಬಾದಾಮಿ	ಬಾದಾಮಿ, ಪಟ್ಟಣದಕಲ್, ಬನಶಂಕರಿ, ಮಹಾಕೂಟಾ, ಶಿವಯೋಗಿ ಮಂದಿರ
18	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
		ಆಳಂದ	ಆಳಂದ
		ಅಫಜಲ್‌ಪುರ	ಗಾಣಗಾಪುರ
		ಶೋರಾಮರ್	ಶೋರಾಮರ್, ಕೆಂಬಾವಿ
		ನೇಡಂ	ನೇಡಂ, ಮಳಖೇಡ
		ಚಿಂಚೋಳಿ	ಚಿಂಚೋಳಿ, ಚಂದ್ರಂವಳ್ಳಿ
		ಜೇವರ್ಗಿ	ಜೇವರ್ಗಿ

1	2	3	4
		ಚಿತಾಪುರ್	ಕಲ್ಲಿ
19	ಬೀದರ್	ಬೀದರ್	ಬೀದರ್
		ಹುಮ್ನಾಬಾದ್	ಹುಮ್ನಾಬಾದ್, ಜಲಸಂಘಿ
		ಬಸವಕಲ್ಯಾಣ	ಬಸವಕಲ್ಯಾಣ, ನಾರಾಯಣಪುರ
		ಭಾಲ್ಕಿ	ಕಾರಂಜಿ ಯೋಜನೆ

ಪ್ರವಾಸ ಸ್ಥಳಗಳ ಒಟ್ಟು ಸಂಖ್ಯೆ 257

(ii) ಮಂಗಳೂರು ನಗರದ ಕಾರ್ಪೋರೇಷನ್ ಮಿತಿಗೊಳಪಟ್ಟು ಸ್ಥಳವನ್ನು ಬಿಟ್ಟು ರಾಜ್ಯದ ಮೂರಾ ಕರಾವಳಿ ಪ್ರದೇಶದಲ್ಲಿನ ಅನುಮೋದಿತ ಸ್ಥಳಗಳು

926 (910) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿ ನಡೆದ ರೈತಪರ ಹೋರಾಟದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಒಟ್ಟು ಮೊಕದ್ದಮೆಗಳು ಎಷ್ಟು, (ಜಿಲ್ಲಾವಾರು ಸಂಖ್ಯೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಸಂಖ್ಯೆ ಒದಗಿಸುವುದು),

ಆ) ಅವುಗಳನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ, ರೈತರ ಮೇಲಿನ ಮೊಕದ್ದಮೆಗಳನ್ನು ಯಾವಾಗ ಹಿಂದಕ್ಕೆ ಪಡೆಯಲಾಗುವುದು?

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ನಡೆದ ರೈತಪರ ಹೋರಾಟದಲ್ಲಿ ನ್ಯೋಂದಣಿಯಾಗಿರುವ ಮೊಕದ್ದಮೆಗಳ ಜಿಲ್ಲಾವಾರು ಮಾಹಿತಿ ಇಂತಿವೆ

ಕ್ರಮ ಸಂಖ್ಯೆ	ಜಿಲ್ಲೆ	ನೊಂದಣಿಯಾದ ಪ್ರಕರಣಗಳು
1	ಬೆಂಗಳೂರು ಜಿಲ್ಲೆ	9 ಪ್ರಕರಣಗಳು
2	ತುಮಕೂರು	9 ಪ್ರಕರಣಗಳು